ದುರಸ್ತಿ ಚಿಂತನೆ ಬರುವುದಿಲ್ಲ, ಬಹುಶಃ ಆ ಸಮಸ್ಯೆ ಬರುವುದಿಲ್ಲ, ಶಾಶ್ವತವಾಗಿ ಆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುತ್ತದೆ. ಎಲ್ಲಿ ಅನಿವಾರ್ಯವಾಗುತ್ತದೆ, ಎಲ್ಲಿ ಆಳವಾಗಿ ನೀರು ಸಿಗುವ ವಾತಾವರಣ ಇದೆ ಅಲ್ಲಿ ಮಾತ್ರ ಸರ್ಕಾರದವರು ಬೋರವೆಲ ವ್ಯವಸ್ಥೆ ಮಾಡಬೇಕೇ ಹೊರತು, ಸಾರಾಸಗಟಾಗಿ ಎಲ್ಲಾ ಕಡೆಯೂ ಬೋರಕೊರೆಯುವ ವ್ಯವಸ್ಥೆ ಏನಿದೆ ಆ ವ್ಯವಸ್ಥೆಯನ್ನು ದಯವಿಟ್ಟು ಕೈಬಿಡಿ. ಎಲ್ಲಿ ವಾಟರ್ ಬೆಲ್ಪ ಚೆನ್ನಾಗಿದೆ ಅಲ್ಲಿ ತೋಡುಭಾವಿ ತೋಡಿ. ಮೋಟರ್ ಕೂರಿಸುವಲ್ಲ ಮಿನಿ ವಾಟರ್ ಸಪ್ಲೈ ಏನು ಮಾಡುತ್ತೀರಿ, ಮಿನಿ ವಾಟರ್ ಸಪ್ಲೈ ಮಾಡುವಂಥ ಕಡೆ ಕೂಡ ತೋಡುಬಾವಿ ಮುಖಾಂತರ ನೀರು ಬರುವುದಕ್ಕೆ ಸಾಧ್ಯತೆ ಇದ್ದರೆ, ಅದಕ್ಕೆ ಮೋಟರ್ ಕೂರಿಸಿ ನೀರನ್ನು ಪಂಪ್ ಮಾಡುವ ವ್ಯವಸ್ತೆ ಮಾಡಿ. ಒಂದು ವೇಳೆ ಮೋಟರ್ ಕೆಟ್ಟು ಹೋದರೆ ತೋಡುಬಾವಿಯಿಂದ ನೀರು ಕುಡಿಯುತ್ತಾರೆ. ಬೋರ ಹಾಕುವ ಬದಲು ಬಾವಿ ವ್ಯವಸ್ಥೆ ಮಾಡುವ ಸಾಧ್ಯತೆ ಎಲ್ಲಿದೆ ಅಲ್ಲಿ ಪರಿಶೀಲನೆ ಮಾಡಿ. ಮಿನಿ ವಾಟರಗೆ ಕೂಡ ಎಲ್ಲಿ ಬಾವಿ ವ್ಯವಸ್ಥೆ ಸಾಧ್ಯತೆ ಇದೆ ಅಲ್ಲಿ ಬಾವಿ ವ್ಯವಸ್ಥೆ ಮೂಲಕ ನೀರಿನ ಸೌಲಭ್ಯ ಮಾಡಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಅಂದರೆ ೧೦೦-೧೫೦ ಅಡಿ ಮೇಲೆ ಹೋಗಬೇಕಾದ ವಾತಾವರಣದಲ್ಲಿ ಮಾತ್ರ ತಾವು ಬೋರ್ ವೆಲ್ ತೋಡುವ ವ್ಯವಸ್ಥೆ ಮಾಡುವಂಥ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಬೋರ್ ಹಾಕುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸತತವಾದ ದುರಸ್ತಿ ಕಾರ್ಯ ಏನಿದೆ ಅದು ಸರ್ಕಾರಕ್ಕೆ ಹೊರೆಯಾಗುತ್ತೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಅಧ್ಯಕ್ಷರು : ಹಿಂದೆ ಬಸ್ ಇಲ್ಲದೆ ಇದ್ದ ಕಾಲದಲ್ಲಿ ೨೦ ಮೈಲಿಯಾದರೂ ನಡೆದು ಹೋಗುತ್ತಿದ್ದರು. ಈಗ ಒಂದು ಕಿಲೋಮೀಟರಗೆ ಕೂಡ ಯಾರೂ ಜಪ್ಪಯ್ಯ ಅಂದರೂ ಬಸ್ ಹತ್ತದೆ ಇರುವುದಿಲ್ಲ. ಹಾಗೆಯೇ ಈಗ ತೋಡು ಬಾವಿಯ ಲಕ್ಷಣ. ಬಾವಿ ತೋಡುವವರು ಯಾರಿದ್ದಾರೆ?

ಒಬ್ಬ ಮಾನ್ಯ ಸದಸ್ಯರು : ಈಗ ಎಲ್ಲಿಯೂ ತೋಡುಬಾವಿ ತೆಗೆಯುವುದಕ್ಕಾಗುವುದಿಲ್ಲ.

ಪ್ರಕಟಣೆ

ಅಧ್ಯಕ್ಷರು : ಸದನದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸಮಗ್ರವಾದ ತನಿಖೆಯನ್ನು ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ಈ ಕೆಳಕಡ ೧೫ ಜನ ವಿಧಾನ ಸಭಾ ಸದಸ್ಯರನ್ನು ಹಾಗೂ ೫ ಜನ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಜಂಟಿ ಸದನ ಸಮಿತಿಯನ್ನು ನೇಮಕ ಮಾಡಲಾಗಿದೆ.

ಶ್ರೀ ಯುತರುಗಳಾದ:

೧. ಕೆ.ಎನ್. ನಾಗೇಗೌಡ .... ಅಧ್ಯಕ್ಷರು

೨. ಸಿ.ಎಂ. ಉದಾಸಿ .... ಸದಸ್ಯರು

೩. ಚಂದ್ರಣ್ಣ, ಜೆ. .... ಸದಸ್ಯರು

೪. ವಸಂತ ಬಂಗೇರ ..... ಸದಸ್ಯರು

೫. ಮನಗೋಳಿ ಎಂ.ಸಿ. .... ಸದಸ್ಯರು

೬. ಎಸ್. ಕೃಷ್ಣಪ್ಪ .... ಸದಸ್ಯರು

೭. ವಿ. ಸೋಮಣ್ಣ .... ಸದಸ್ಯರು

೮. ದಿವಾಕರ ಬಾಬು, ಎಂ. .... ಸದಸ್ಯರು

೯. ವೀರಪ್ಪ ಮೊಯ್ಲಿ, ಎಂ. .... ಸದಸ್ಯರು

೧೦. ಶಿವರಾಮ್ ಬಿ. .... ಸದಸ್ಯರು

೧೧. ಬಿ. ಬಿ. ಶಿವಪ್ಪ .... ಸದಸ್ಯರು

೧೨. ಕೆ.ಎಸ್. ಈಶ್ವರಪ್ಪ .... ಸದಸ್ಯರು

೧೩. ವಾಟಾಳ್ ನಾಗರಾಜ್ .... ಸದಸ್ಯರು

೧೪. ಶ್ರೀರಾಮ ರೆಡ್ಡಿ, ಜಿ.ವಿ. .... ಸದಸ್ಯರು

೧೫. ಪುಟ್ಟಣ್ಣಯ್ಯ, ಕೆ.ಎಸ್ .... ಸದಸ್ಯರು

ಈ ಸಮಿತಿಯು ವರದಿಯನ್ನು ಇಂದಿನಿಂದ ಮೂರು (೩) ತಿಂಗಳ ಒಳಗೆ ನೀಡುವಂತೆ ಸೂಚಿಸಲಾಗಿದೆ.

ವಿಧಾನ ಪರಿಷತ್ತಿನಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಹೆಸರನ್ನು ಮಾನ್ಯ ಸಭಾಪತಿಯವರು ಪ್ರಕಟಿಸುತ್ತಾರೆ.

ಈಗ ಸಭೆಯನ್ನು ಮುಂದೂಡಿ ಪುನಃ ಬುಧವಾರ ತಾರೀಖು ೩೦ ರಂದು ಬೆಳಿಗ್ಗೆ ೧೧ ಗಂಟೆಗೆ ಸೇರುವುದು.

(ಸಭೆ ಸಂಜೆ ೪ ಗಂಟೆ ೫೫ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ೩೦ ನೇ ಆಗಸ್ಟ ೧೯೯೫ರ ಬುಧುವಾರ ಬೆಳಿಗ್ಗೆ ಗಂಟೆಗೆ ಸಮಾವೇಶಗೊಳ್ಳುವುದಾಗಿ ತೀರ್ಮಾನವಾಯಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).